**<u>ಹೆಚ್ಚುವರಿ ಸಿವಿಲ್ ಜಡ್ಜ ಮತ್ತು ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಭಟ್ಕಳ.</u>**

**<u>ಸಿ. ಸಿ. ನಂಬರಃ 3074/2024</u>**

**ಫಿರ್ಯಾದುದಾರರು** ಶ್ರೀ ಜನಾರ್ಧನ ತಂದೆಃ ಶ್ರೀನಿವಾಸ ಕಾಮತ್,

**– ವಿರುದ್ಧ –**

**ಆರೋಪಿತರು** ಶ್ರೀ ಮಾರುತಿ ತಂದೆಃ ತಮ್ಮಣ್ಣ ಕೊರ್ಗಾಂವಕರ್,
ವಯಸ್ಸುಃ 52 ವರ್ಷ,
ಸಾಃ ಹೊನಮಾವ್ ಲಕ್ಷ್ಮೀ ಗ್ಯಾರೇಜ್ ಹತ್ತಿರ,
ಕುಮಟಾ (ಉ.ಕ.)

**<u>ಆಪಾದನೆ</u>**

ಆರೋಪಿಯಾದ ನಿಮ್ಮ ವಿರುದ್ಧ ಭಟ್ಕಳ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯದಲ್ಲಿ ಚೆಕ್ ಅಮಾನ್ಯ ಪ್ರಕರಣಕ್ಕೆ ಸಂಬಂಧಿಸಿ ಕ್ರಿಮಿನಲ್ ಪ್ರಕರಣ ನಂ.90/2021 ನ್ನು ದಾಖಲಿಸಿದ್ದು, ಸದ್ರಿ ಪ್ರಕರಣದಲ್ಲಿ ನೀವು ರಾಜಿ ಮಾಡಿಕೊಂಡು ರಾಜಿ ಮೆಮೊದಲ್ಲಿ ದಾಖಲಿಸಿದಂತೆ ರೂ. 35,000/- ( ರೂಪಾಯಿ ಮೂವತ್ತೈದು ಸಾವಿರ ಮಾತ್ರ) ಮೊದಲ ಕಂತಾಗಿ ದಿನಾಂಕಃ 08-10-2024 ರಂದು ನೀಡುವುದಾಗಿ ಭಾರತೀಯ ಸ್ಟೇಟ್ ಬ್ಯಾಂಕ್ ಕುಮಟಾ ಮುಖ್ಯ ಶಾಖೆಯ ಚೆಕ್ ನಂಬರ್ 703614 ನ್ನು ರ ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿರುತ್ತೀರಿ. ಸದ್ರಿ ಚೆಕ್ಕನ್ನು ಫಿರ್ಯಾದಿದಾರರು ನಗದೀಕರಣಕ್ಕಾಗಿ ಅವರ ವ್ಯವಹಾರದ ಬ್ಯಾಂಕಾದ ಶ್ಯಾಮರಾವ್ ವಿಠ್ಠಲ್ ಕೋ-ಅಪರೇಟಿವ್ ಬ್ಯಾಂಕ್ ಲಿ., ಚಿತ್ರಾಪುರ ಶಿರಾಲಿ ಶಾಖೆಯಲ್ಲಿ ಹಾಜರುಪಡಿಸಿದಾಗ, "Funds Insufficient" ಎಂಬ ಹಿಂಬರಹದೊಂದಿಗೆ ದಿನಾಂಕಃ 09-10-2024 ರಂದು ವಾಪಸ್ಸು ಬಂದಿರುತ್ತದೆ.

ನಂತರ ಫಿರ್ಯಾದಿದಾರರು ದಿನಾಂಕಃ 28-10-2024 ರಂದು ತಮ್ಮ ವಕೀಲರ ಮೂಲಕ ನೋಟಿಸ್ ನ್ನು ನಿಮಗೆ ನೀಡಿದ್ದು, ಸದ್ರಿ ನೋಟಿಸ್ ನೀಡಿ ನಿಗದಿತ ಅವಧಿಯೊಳಗೆ ಚೆಕ್ಕನಲ್ಲಿ ನಮೂದಿಸಿದ ಹಣವನ್ನು ನೀಡುವಂತೆ ಸೂಚಿಸಿದ್ದು ಇರುತ್ತದೆ, ಸದ್ರಿ ನೋಟಿಸ್ಸನ್ನು ನೀವು ಸ್ವೀಕರಿಸದೇ ದಿನಾಂಕಃ 13-11-2024 ರಂದು Unclaimed ಎಂದು ವಾಪಸ್ಸು ಬಂದಿರುತ್ತದೆ. ಆದರೆ ಇಂದಿನವರೆಗೂ ಸಹ ನೀವು ಚೆಕ್ಕಿನ ಹಣವನ್ನು ಪಾವತಿ

ಮಾಡದೆ ಆ ಮೂಲಕ ನೆಗೋಶಿಯೇಬಲ್ ಇನ್ಸ್ಟ್ರುಮೆಂಟ ಆಕ್ಟ ಕಲಂ 138 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವೆಸಗಿದ್ದೀರಿ ಎಂದು ಅದು ನನ್ನ ಸಂಜ್ಞೆಯಲ್ಲಿ ಬರುತ್ತದೆ.

ಪ್ರಶ್ನೆ – ನಿಮ್ಮ ಮೇಲೆ ಹೊರಿಸಲಾದ ಆಪಾದನೆ ಕೇಳಿದ್ದೀರಾ? ಅದು ನಿಮಗೆ ತಿಳಿಯಿತೇ?

ಉತ್ತರ – ಹೌದು

ಪ್ರಶ್ನೆ – ನೀವು ಸದ್ರಿ ಆಪಾದನೆಯನ್ನು ಒಪ್ಪಿಕೊಳ್ಳುತ್ತೀರಾ? ಅಥವಾ ನಿಮ್ಮ ವಿರುದ್ಧ ವಿಚಾರಣೆ ನಡೆಯಬೇಕೇ?

ಉತ್ತರ – ಇಲ್ಲ. ವಿಚಾರಣೆಯಾಗಬೇಕು.

(ಮೇಲಿನ ಆಪಾದನೆಯನ್ನು ಆಪಾದಿತನಿಗೆ ತಿಳಿದಿರುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿ ಅವರು ನೀಡಿದ ಉತ್ತರವನ್ನು ಯಥಾರೀತಿ ಬರೆದುಕೊಂಡಿರುವುದಾಗಿ ಈ ಮೂಲಕ ದೃಢೀಕರಿಸಲಾಗಿದೆ.

ಸಹಿ ಇದೆ/–

**(ಶ್ರೀಮತಿ.ಧನವತಿ)**

ಹೆಚ್ಚುವರಿ ಸಿವಿಲ್ ಜಡ್ಜ ಮತ್ತು

ದಿನಾಂಕಃ 27–06–2025. ನ್ಯಾಯಿಕ ದಂಡಾಧಿಕಾರಿ, ಭಟ್ಕಳ.